# ಸ್ವಗ್ರಾಮ ಫೆಲೋಶಿಪ್

## ನಮ್ಮ ಗ್ರಾಮ ನಮ್ಮ ಹೆಮ್ಮೆ

*ಬನ್ನಿ ಸ್ವಾವಲಂಬೀ ಗ್ರಾಮ ಸ್ವರಾಜ್ಯದ ಮೂಲಕ ಆತ್ಮನಿರ್ಭರ ಭಾರತಕ್ಕಾಗಿ ನವನಿರ್ಮಾಣದ ಹೊಸಮನ್ವಂತರಕ್ಕೆ ಸಂಕಲ್ಪ ಮಾಡೋಣ.*

************

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಕಾಲಘಟ್ಟದಲ್ಲಿ ಗ್ರಾಮ ಸ್ವರಾಜ್ಯದ ಚರ್ಚೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಹಳ್ಳಿಗಳ ದೇಶವಾಗಿರುವ ಭಾರತದಲ್ಲಿ ಸ್ವಾವಲಂಬಿ ಗ್ರಾಮಗಳು ಇಂದಿಗೂ ಕೇವಲ ಆದರ್ಶವಾಗಿವೆ. ಸಹಸ್ರಮಾನಗಳಿಂದ ಚಿಂತಕರುಗಳನ್ನು ವಿಸ್ಮಿತರಾಗಿಸಿದ್ದ ಈ ಗ್ರಾಮ ಸ್ವರಾಜ್ಯವೇ ಸನ್ನಡತೆ, ಸಚ್ಚಾರಿತ್ರ್ಯ, ಸಂಸ್ಕಾರಯುತ ನಾಗರೀಕರನ್ನು ನೀಡಿರುವುದು ನಮ್ಮೆಲ್ಲರ ಅನುಭವ.

ಭಾರತೀಯ ಸಂಸ್ಕೃತಿಯ ಮೂಲಸ್ರೋತವಾದ ಗ್ರಾಮಗಳ ಪರಿಸ್ಥಿತಿ ಸ್ವತಂತ್ರ್ಯ ಭಾರತದಲ್ಲಿ ಅಧೋಗತಿಯೆಡೆಗೆ ಪಯಣಿಸುತ್ತಿದೆ. ಭಾರತದಲ್ಲಿ ಒಂದುವರೆ ಶತಮಾನಗಳಿಂದ ಗ್ರಾಮೋತ್ಥಾನದ ಕುರಿತು ಆಗಾಧ ಚಿಂತನೆಗಳು ಮತ್ತು ಪ್ರಯೋಗಗಳು ನಿರಂತರವಾಗಿ ನಡದೇ ಇವೆ. ಆದರೂ ಇಂದು ಗ್ರಾಮೋತ್ಥಾನ ಮರಿಚಿಕೆಯಾಗಿಯೇ ಉಳಿದಿದೆ. ಹಾಗೆಂದ ಮಾತ್ರಕ್ಕೆ ಗ್ರಾಮೋತ್ಥಾನ ಅವಗಣನೆಗೆ ಒಳಪಟ್ಟಿದೆಯೆಂದಲ್ಲ. ಕೆಲವರು ಶಿಕ್ಷಣವನ್ನೋ, ಆರೋಗ್ಯವನ್ನೋ, ಕೃಷಿಯನ್ನೋ, ಕೇಂದ್ರವಾಗಿರಿಸಿಕೊಂಡು ಗ್ರಾಮೋತ್ಥಾನಕ್ಕಾಗಿ ಸಾಕಷ್ಟು ದುಡಿದದ್ದೂ ಇದೆ. ಸರ್ವೋದಯದಂತಹ ಮಾದರಿಗಳೂ ನಮ್ಮ ಮುಂದಿವೆ. ಸರ್ಕಾರಗಳು ಗ್ರಾಮಾಭ್ಯುದಯದ ಸರಿಯಾದ ಮಾದರಿಗಳಿಗಾಗಿ ಹುಡುಕಾಡುತ್ತಲೇ ಇವೆ. ಇವೆಲ್ಲದರ ನಡುವೆ ಗ್ರಾಮಗಳು ಮತ್ತು ಗ್ರಾಮಸ್ಥರು ಸರ್ವತೋಮುಖವಾಗಿ ಹಿನ್ನೆಲೆಗೆ ಸರಿಯುತ್ತಿರುವುದು ಅಷ್ಟೇ ಸತ್ಯ. ಈ ಮಾದರಿಗಳು ಗ್ರಾಮದ ಸ್ವಭಾವ ಮತ್ತು ಅಂತಸತ್ವವನ್ನು ಗುರುತಿಸದೆ, ಪಶ್ಚಿಮದಿಂದ ಎರವಲುಪಡೆದ ಪರಕೀಯ ಮತ್ತು ಭೌತಿಕ ಅಭಿವೃದ್ಧಿಯ ಮಾದರಿಗಳ ಕಡೆಗೆ ಒತ್ತಾಯಪೂರ್ವಕವಾಗಿ ಗ್ರಾಮಗಳನ್ನು ದೂಡಿ, ಗ್ರಾಮ ಸ್ವರಾಜ್ಯವೆಂದರೆ ಪರಾವಲಂಬನೆ ಎನ್ನುವಂತೆ ಮಾಡಿವೆ. ಅಷ್ಟೇ ಅಲ್ಲ ಗ್ರಾಮ ವಿಕಾಸದ ಈ ಮಾದರಿಗಳು ಪರಂಪಾರನುಗತ ಕ್ರಿಯಾಜ್ಞಾನವನ್ನು ಅನುಪಯುಕ್ತವೆಂಬಂತೆ ಬಿಂಬಿಸಿವೆ. ಗ್ರಾಮವೊಂದರ ಅಂತಃಸತ್ವದ ಆಧಾರದ ಮೇಲೆ ಗ್ರಾಮದ ಜನರೇ ನಿರ್ಣಯಿಸಿ ಕಟ್ಟಬೇಕಾಗಿರುವ ಸ್ವಾವಲಂಬೀ ಗ್ರಾಮವನ್ನು, ಪ್ರಭುತ್ವದ ಕೆಲವು ಕಚೇರಿಗಳ ಕೆಲಸವನ್ನಾಗಿ ಪರಿವರ್ತಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸ್ವಾತಂತ್ರದ ಅಮೃತ ಮಹೋತ್ಸವದ ಸಂದರ್ಭದಲ್ಲಿ, ಆತ್ಮನಿರ್ಭರ ಭಾರತದ ಕನಸನ್ನು ಕಾಣಬೇಕೆಂದರೆ, ಅದು ಸ್ವಾಲವಂಬೀ ಗ್ರಾಮದ ಕಡೆಗೆ ಹೆಜ್ಜೆ ಹಾಕುವುದೆಂದೇ ಅರ್ಥ. ಈ ನಡೆ ಹೊಸತನದ ವಿರೋಧಿಯಲ್ಲ, ಬದಲಿಗೆ ಹೊಸಚಿಗುರು ಹಳೆಬೇರು ಎನ್ನುವ ವಾಕ್ಯದಂತೆ. ಹಾಗಾಗಿ ಆತ್ಮನಿರ್ಭರ ಭಾರತವೆಂದರೇ, ಸಮಗ್ರವಿಕಾಸದ ಕಲ್ಪನೆಯಡಿ, ಗ್ರಾಮಗಳ ಸ್ವಭಾವಗಳನ್ನು ಆಧರಿಸಿ, ಗ್ರಾಮಸ್ಥರೇ ನಿರ್ಣಯಿಸಿ ಕ್ರಿಯಾನ್ವಯಗೊಳಿಸುವ ಅಭ್ಯುತ್ಥಾನ ಪಥ. ಇಂತಹ ಒಂದು ಮಾದರಿಯನ್ನು ಕಾರ್ಯರೂಪಕ್ಕೆ ತರಲು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ನೇತೃತ್ವದಲ್ಲಿ, ಅನೇಕ ಸಮಾನಮನಸ್ಕ ಸಂಸ್ಥೆಗಳು ಮತ್ತು ಚಿಂತಕರು ಮೂರು ವರ್ಷದ ಒಂದು ಕ್ರಿಯಾಯೋಜನೆಯನ್ನು ಸಿದ್ಧಪಡಿಸಿದ್ದಾರೆ.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯವನ್ನು (KSRDPRU) ಸುಸ್ಥಿರ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಬೋಧನೆ, ತರಬೇತಿ ಮತ್ತು ಸಂಶೋಧನೆಗಾಗಿ ಸ್ಥಾಪಿಸಲಾಗಿದೆ. ಪ್ರಸ್ತುತ, ಸದರಿ ವಿಶ್ವವಿದ್ಯಾಲಯವು ಸ್ವ-ತತ್ವದ ಆಧಾರದ ಮೇಲೆ ಗ್ರಾಮ ವಿಕಾಸವನ್ನು ಸಾಧಿಸಲು ಹಾಗೂ ಗ್ರಾಮ ವಿಕಾಸದ ಮಾದರಿಗಳನ್ನು ರೂಪಿಸಲು ಯೂತ್ ಫಾರ್ ಸೇವಾ, ಚಾಣಕ್ಯ ವಿಶ್ವವಿದ್ಯಾಲಯ, ಪ್ರಜ್ಞಾಪ್ರವಾಹ ಮತ್ತು ಕುವೆಂಪು ವಿಶ್ವವಿದ್ಯಾಲಯದ ಅಬ್ದುಲ್ ನಜೀರ್ ಸಾಬ್ ಅಧ್ಯಯನಪೀಠದ ಸಹಯೋಗದೊಂದಿಗೆ ಸ್ವಗ್ರಾಮ ಫೆಲೋಶಿಪ್‌ಅನ್ನು ಆರಂಭಿಸಿದೆ.

**ಫೆಲೋಶಿಪ್ ಉದ್ದೇಶ:**

ಮೂರು ವರ್ಷ ಕಾಲಾವಧಿಯ ಗುಂಪು ಮಾದರಿಯ ಫೆಲೋಶಿಪ್ ಇದಾಗಿದ್ದು ಸದರಿ ಫೆಲೊಶಿಪ್ ಮೂಲಕ ಗ್ರಾಮದ ಸ್ವಭಾವಕ್ಕೆ ಅನುಗುಣವಾಗಿ ಗ್ರಾಮ ವಿಕಾಸದ ಮಾದರಿಗಳ ನಿರ್ಮಾಣ ಮಾಡುವ, ಪರಸ್ಪರಾವಲಂಬನೆ ಮತ್ತು ಸಹಕಾರದ ಆಧಾರದ ಮೇಲೆ ಸ್ವಾವಲಂಬೀ ಗ್ರಾಮ ನಿರ್ಮಾಣ ಮಾಡುವ ಹಾಗೂ ರಾಷ್ಟ್ರಮಟ್ಟದಲ್ಲಿ ಈ ಪ್ರಯೋಗದ ಫಲಿತಗಳನ್ನು ವಿಸ್ತರಿಸಲು ಸಮಗ್ರ ಗ್ರಾಮ ವಿಕಾಸದ ಪರಿಕಲ್ಪನೆಯ ಚೌಕಟ್ಟು ಮತ್ತು ಸಾಧನಗಳನ್ನು ಅಭಿವೃದ್ಧಿಪಡಿಸುವ ಉದ್ದೇಶಹೊಂದಲಾಗಿದೆ.

**ಉದ್ದೇಶಗಳು**

- ಸಮಗ್ರ ವಿಕಾಸದ ಪರಿಕಲ್ಪನೆಯ ಮೇಲೆ ಗ್ರಾಮ ವಿಕಾಸ ಸಾಧಿಸುವುದು.
- ಗ್ರಾಮದ ಸ್ವಭಾವಕ್ಕೆ ಅನುಗುಣವಾಗಿ ಗ್ರಾಮ ವಿಕಾಸದ ಮಾದರಿಗಳ ನಿರ್ಮಾಣ.
- ಪರಸ್ಪರಾವಲಂಬನೆ ಮತ್ತು ಸಹಕಾರದ ಆಧಾರದ ಮೇಲೆ ಸ್ವಾವಲಂಬೀ ಗ್ರಾಮ ನಿರ್ಮಾಣ
- **ರಾಷ್ಟ್ರಮಟ್ಟದಲ್ಲಿ ವಿಸ್ತರಿಸಲು ಸಮಗ್ರ ಗ್ರಾಮ ವಿಕಾಸದ ಪರಿಕಲ್ಪನೆಯ ಚೌಕಟ್ಟು ಮತ್ತು ಸಾಧನಗಳನ್ನು ಅಭಿವೃದ್ಧಿಪಡಿಸುವುದು.**

**ಫೆಲೋಶಿಪ್‌ನ ವಿಶೇಷಗಳು**

1. ಸ್ವ ಆಧಾರಿತ ಗ್ರಾಮ ವಿಕಾಸದ ಮಾದರಿಯ ನಿರ್ಮಾಣಕ್ಕಾಗಿ ಗುಂಪು ಮಾದರಿಯ ಫೆಲೋಶಿಪ್ ಯೋಜಿಸಿದ್ದು ಅನೇಕರು ಜೊತೆಗೂಡಿ ಗ್ರಾಮ ವಿಕಾಸದಲ್ಲಿ ಭಾಗವಹಿಸಲು ಯೋಜನೆ ಅವಕಾಶ ನೀಡುತ್ತದೆ.
2. ತನ್ನದೇ ಗ್ರಾಮವನ್ನು ವಿಕಾಸದತ್ತ ಕೊಂಡೊಯ್ಯಬೇಕು ಎಂಬ ಪ್ರತಿಯೊಂದೂ ತಂಡಕ್ಕೂ ಅಗತ್ಯವಾದ ಜ್ಞಾನ–ಕೌಶಲ್ಯ ಹಾಗೂ ಮಾದರಿಗಳನ್ನು ತಜ್ಞರ ಹಾಗೂ ಸಂಸ್ಥೆಗಳ ಮೂಲಕ ಮೆಂಟರಿಂಗ್ ಒದಗಿಸಲಾಗುವುದು.
3. ಗ್ರಾಮ ವಿಕಾಸವು ಒಂದು ವೃತ್ತಿಯೋ ಅಥವಾ ಪ್ರವೃತ್ತಿಯೋ ಆಗಿರದೇ ಅದೊಂದು ಜೀವನ ವಿಧಾನವಾಗಿರುವಂತೆ ಫೆಲೋಗಳಿಗೆ ನಿತ್ಯಜೀವನ ಜೊತೆ ಜೊತೆಗೆ ಗ್ರಾಮ ವಿಕಾಸದಲ್ಲಿ ತೊಡಗಿಸಿಕೊಳ್ಳುವ ಹಿನ್ನೆಲೆಯಲ್ಲಿ ರೂಪುಗೊಂಡಿದೆ.
4. ಈ ಫೆಲೋಶಿಫ್ ನಲ್ಲಿ ಫೆಲೋಗಳು ಬದಲಾವಣೆಯ ಹರಿಕಾರರಲ್ಲ, ಬದಲಿಗೆ ಗ್ರಾಮಸ್ಥರೇ ಬದಲಾವಣೆಯ ರುವಾರಿಗಳು. ಈ ಜನಕೇಂದ್ರಿತ ಬದಲಾವಣೆಯ ಪ್ರಕ್ರಿಯೆಯನ್ನು ಸುಗಮಗೊಳಿಸುವ ಜವಾಬ್ದಾರಿ ಮಾತ್ರ ಫೆಲೋಗಳದ್ದು.
5. ಒಟ್ಟಾರೆಯಾಗಿ ಗ್ರಾಮದ ಸ್ವಭಾವಕ್ಕೆ ಅನುಗುಣವಾಗಿ ಗ್ರಾಮಸ್ಥರ ಪಾಲ್ಗೊಳ್ಳುವಿಕೆಯ ಮೂಲಕ ಗ್ರಾಮದಲ್ಲಿ ಪರಿವರ್ತನೆ ಹಾಗೂ ವಿಕಾಸವನ್ನು ಅವರೇ ನಿರ್ಧರಿಸಿಕೊಳ್ಳಲು ಸಹಕಾರಿಯಾಗುವಂತೆ ಸುಗಮಗೊಳಿಸುವ ಫೆಲೋಶಿಪ್ ಇದಾಗಿದೆ.

**ಫೆಲೋಶಿಪ್‌ಗೆ ಅರ್ಜಿ ಸಲ್ಲಿಸಲು ಅರ್ಹರು:**

- ಸ್ವ ಉದ್ಯೋಗ ಮಾಡುತ್ತ ತನ್ನ ಗ್ರಾಮ ವಿಕಾಸಕ್ಕೆ ತೊಡಗಿಸಿಕೊಳ್ಳಬಯಸುವವರು.
- ತಮ್ಮ ಗ್ರಾಮದ ವಿಕಾಸಕ್ಕೆ ಈಗಾಗಲೇ ತೊಡಗಿಸಿಕೊಂಡಿರುವವರು.
- ಗ್ರಾಮದಿಂದ ಹೊರಗಿದ್ದು ವಿವಿಧ ಕ್ಷೇತ್ರಗಳಲ್ಲಿ, ವಿವಿಧ ಭಾಗಗಳಲ್ಲಿ ತೊಡಗಿಕೊಂಡಿದ್ದು ತನ್ನ ಗ್ರಾಮಕ್ಕೆ ಕೊಡುಗೆ ಕೊಡುವ ಆಸಕ್ತಿ ಇರುವವರು.

**ಫೆಲೋಶಿಪ್‌ಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ:**

- ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರು.
- ಚುನಾಯಿತ ಜನಪ್ರತಿನಿಧಿಗಳು.

**ಫೆಲೋಶಿಪ್‌ಗೆ ಅರ್ಜಿ ಸಲ್ಲಿಸಲು ಅಗತ್ಯವಾದ ಮಾನದಂಡಗಳು**

- ಇದು ಗುಂಪು ಮಾದರಿ ಫೆಲೋಶಿಪ್ ಆಗಿದ್ದು ಮೂರು ಜನರ ತಂಡ ಅರ್ಜಿ ಸಲ್ಲಿಸಬಹುದಾಗಿದೆ.
- ಮೂರು ಜನರ ತಂಡ ಮಾಡಿಕೊಳ್ಳುವಾಗ ಈ ಕೆಳಗಿನ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು.
    - ಮೂರು ಜನ ಅಭ್ಯರ್ಥಿಗಳಲ್ಲಿ ಇಬ್ಬರು ತಾವು ಗ್ರಾಮ ವಿಕಾಸಕ್ಕೆ ಆಯ್ಕೆ ಮಾಡಿದ ಗ್ರಾಮದಲ್ಲಿ ವಾಸವಿರುವುದು ಕಡ್ಡಾಯ.
    - ಒಬ್ಬ ಅಭ್ಯರ್ಥಿ ಗ್ರಾಮದಿಂದ ಹೊರಗಿದ್ದು ಆ ಗ್ರಾಮದ ವಿಕಾಸಕ್ಕೆ ತೊಡಗಿಸಿಕೊಳ್ಳುವ ಆಸಕ್ತಿ ಇದ್ದಲ್ಲಿ ಅಂತಹವರನ್ನು ಸೇರಿಸಿಕೊಳ್ಳಬಹುದು.
    - ಈ ಮೂರು ಜನರಲ್ಲಿ ಒಬ್ಬರು ಮಹಿಳಾ ಅಭ್ಯರ್ಥಿ ಇದ್ದಲ್ಲಿ ಉತ್ತಮ.
    - ಒಂದೇ ಕುಟುಂಬದ ಮೂರು ಜನ ಅರ್ಜಿ ಸಲ್ಲಿಸುವಂತಿಲ್ಲ.

- ಈಗಾಗಲೇ ತಮ್ಮ ಗ್ರಾಮದ ಅಭಿವೃದ್ಧಿ ಚಟುವಟಿಕೆಯಲ್ಲಿ ತೊಡಗಿದ ಅನುಭವವಿದ್ದಲ್ಲಿ ಅಂತಹ ತಂಡಕ್ಕೆ ಆದ್ಯತೆ ನೀಡಲಾಗುವುದು. ಸದರಿ ಅನುಭವನ್ನು ಅರ್ಜಿಯ ಜೊತೆಗೆ ಲಗ್ತಿತ್ತಿಸಬೇಕು.
- ಸ್ವಗ್ರಾಮ ಫೆಲೋಶಿಪ್‌ನ ಪ್ರಕ್ರಿಯೆಯ ಭಾಗವಾಗಿ ನಡೆಯುವ ಎಲ್ಲಾ ತರಬೇತಿಗಳು ಹಾಗೂ ಪರಾಮರ್ಶನಾ ಸಭೆಗಳಿಗೆ ಗೌರವಧನ ಪಡೆಯುವ ಅಭ್ಯರ್ಥಿಗಳು ಹಾಜರಾಗುವುದು ಕಡ್ಡಾಯ. ಆದರೆ ಗ್ರಾಮದಿಂದ ಆಚೆ ಇರುವ ತಂಡದ ಸದಸ್ಯರಿಗೆ ತರಬೇತಿಯ ಸ್ವರೂಪ ಮತ್ತು ಸಮಯ ಅವಶ್ಯಕತೆಗನುಗುಣವಾಗಿ ನಿಶ್ಚಯಿಸಲಾಗುವುದು.

**ಆಯ್ಕೆ ಪ್ರಕ್ರಿಯೆ:**

| | |
|---|---|
| ಹಂತ:-1 | ಸಲ್ಲಿಸಲಾದ ಅರ್ಜಿಗಳನ್ನು ಅವುಗಳ ಗುಣಮಟ್ಟ ಹಾಗೂ ಅರ್ಹತೆಯ ಆಧಾರದ ಮೇಲೆ ಆಯ್ಕೆಪಟ್ಟಿಗೆ ಸೇರಿಸಲಾಗುವುದು. |
| ಹಂತ:-2 | ಶಾರ್ಟ್‌ಲಿಸ್ಟ್ ಆದ ಅಭ್ಯರ್ಥಿಗಳ ಸಂದರ್ಶನ ನಡೆಸಲಾಗುವುದು. |
| ಹಂತ:-3 | ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮೂಲಭೂತ ತರಬೇತಿ ನಡೆಸಲಾಗುತ್ತದೆ. ಸದರಿ ತರಬೇತಿಯಲಿ ಸದರಿ ಅಭ್ಯರ್ಥಿಗಳ ಭಾಗವಹಿಸುವಿಕೆಯನ್ನು ಗಮನಿಸಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು. |

**ಫೆಲೋಶಿಪ್ ಮೂಲಧನ**

1. ಫೆಲೋಶಿಪ್‌ಗೆ ಆಯ್ಕೆಯಾದ ತಂಡದ ಗ್ರಾಮದಲ್ಲೇ ವಾಸವಿರುವ ಅಭ್ಯರ್ಥಿಗಳಿಗೆ ಫೆಲೋಗಳಿಗೆ ರೂ 5000 ಮಾಸಿಕ ಗೌರವಧನ ನೀಡಲಾಗುವುದು.
2. ಅಲ್ಲದೆ ಈ ಫೆಲೋಶಿಪ್‌ನಲ್ಲಿ ಫೆಲೋಗಳು ತಾವು ಗ್ರಾಮ ವಿಕಾಸಕ್ಕೆ ಆಯ್ಕೆಮಾಡಿದ ಗ್ರಾಮದ ವಿಕಾಸಕ್ಕೆ ಪೂರಕವಾಗಿ ಹಮ್ಮಿಕೊಳ್ಳುವ ಚಟುವಟಿಕೆಗಳನ್ನು ಕೈಗೊಳ್ಳಲು ಮೊದಲ ವರ್ಷ ರೂ 50000ದ ವರೆಗೆ ಮೂಲಧನವನ್ನು ನೀಡಲಾಗುವುದು. (ಸೀಡ್ ಮನಿ).
3. ಎರಡೂ ಮತ್ತು ಮೂರನೇ ವರ್ಷ ಗ್ರಾಮ ವಿಕಾಸ ಪ್ರಕ್ರಿಯೆಯಲ್ಲಿ ಫೆಲೋಗಳ ಬದ್ದತೆ ಹಾಗೂ ಅವರ ಕಾರ್ಯಯೋಜನೆಯನ್ನು ಗಮನಿಸಿ ಮೂಲಧನವನ್ನು ನೀಡಲಾಗುವುದು.
4. ತರಬೇತಿಗಳು ಹಾಗೂ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯ ಮತ್ತು ಪ್ರಯಾಣ ಭತ್ಯೆಯನ್ನು ಪಾವತಿಸಲಾಗುವುದು.
5. ಎರಡು ಮತ್ತು ಮೂರನೇ ವರ್ಷದಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅಗತ್ಯವಾದ ಆರ್ಥಿಕ ಸಂಪನ್ಮೂಲವನ್ನು ಹೊಂದಿಸಿಕೊಳ್ಳುವ ಬಗ್ಗೆ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು.
6. ಗ್ರಾಮ ವಿಕಾಸಕ್ಕೆ ಪೂರಕವಾದ ಕಾರ್ಯಚಟುವಟಿಕೆಗಳ ಅನುಷ್ಠಾನದಲ್ಲಿ ಉಪಯುಕ್ತವಾಗುವ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ತರಬೇತಿ ನೀಡಲಾಗುವುದು.

**ಫೆಲೋಶಿಪ್ ಕಾಲಾವಧಿ ಮತ್ತು ವೇಳಾಪಟ್ಟಿ**

- ಇದು ಒಟ್ಟಾರೆ ಮೂರು ವರ್ಷದ ಪ್ರಕ್ರಿಯೆಯಾಗಿರುತ್ತದೆ. (ನವೆಂಬರ್ 2022 ರಿಂದ ನವೆಂಬರ್ 2025ರ ವರೆಗೆ)
- ಮೊದಲ ವರ್ಷ ಆಳವಾದ ಮತ್ತು ವಿಸ್ತಾರವಾದ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಉಳಿದ ಎರಡು ವರ್ಷಗಳು ಮೆಂಟರಿಂಗ್ ಮತ್ತು ಮಾರ್ಗದರ್ಶನ ಸ್ವರೂಪದಲ್ಲಿರುತ್ತದೆ.

***: ಸಮಯಸಾರಿಣಿ :***

| ಕ್ರ.ಸಂ | ಚಟುವಟಿಕೆಗಳು | ನಿಗದಿತ ಸಮಯ |
|---|---|---|
| 1 | ಫೆಲೋಶಿಪ್ ಲೋಕಾರ್ಪಣೆ | 2022 ನವೆಂಬರ್ 2 |
| 2 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 2022 ಡಿಸೆಂಬರ್ 15 |
| 3 | ಅರ್ಜಿಗಳ ಕ್ರೋಢೀಕರಣ ಮತ್ತು ತಂಡಗಳ ಸಂದರ್ಶನ | 2022 ಡಿಸೆಂಬರ್ 30 |
| 4 | ಮೊದಲ ಹಂತಕ್ಕೆ ಆಯ್ಕೆಯಾದ ತಂಡದ ಅಭ್ಯರ್ಥಿಗಳಿಗೆ ತರಬೇತಿ | 2023 ಜನವರಿ 20 |
| 5 | ಗ್ರಾಮಗಳ ಅಂತಿಮ ಅಯ್ಕೆ ಪಟ್ಟಿ ಪ್ರಕಟಣೆ | 2023 ಜನವರಿ 31 |
| 6 | ಆಯ್ಕೆಯಾದ ಗ್ರಾಮಗಳಲ್ಲಿ ಚಟುವಟಿಕೆಗಳ ಆರಂಭ | 2023 ಫೆಬ್ರವರಿ ರಿಂದ |

**ಆಗಾಗ ಕೇಳಾಗುವ ಪ್ರಶ್ನೆಗಳು**

1. **ಅರ್ಜಿ ಸಲ್ಲಿಸುವ ವಿಧಾನ ಯಾವುದು**?
   ಅರ್ಜಿಯನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದಾಗಿದೆ. ಅಲ್ಲದೆ ವೆಬ್‌ಸೈಟ್‌ನಲ್ಲಿ ಅರ್ಜಿಯ ಪ್ರತಿ ಪಿಡಿಎಫ್ ಮಾದರಿಯಲ್ಲೂ ಲಭ್ಯವಿರುತ್ತದೆ. ಡೌನ್ ಲೋಡ್ ಮಾಡಿಕೊಂಡು ಬರೆದು ಪೋಸ್ಟ್ ಕೂಡ ಮಾಡಬಹುದು.
2. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಯಾವುದು**?
   2022 ಡಿಸೆಂಬರ್ 15 ಅರ್ಜಿ ಸಲ್ಲಿಸಲು ಕೊನೆಯ ದಿನ.
3. **ಗುಂಪು ಫೆಲೋಶಿಪ್ ಏಕೆ**?
   ಸಮೂಹ ಚಿಂತನೆ, ಪರಸ್ಪರ ಪ್ರೇರಣೆ, ಸಹಭಾಗಿತ್ವ ಯೋಜನೆ, ವಿಭಿನ್ನ ಆಲೋಚನೆಗಳಿಗೆ ಮುಕ್ತತೆ, ಇತ್ಯಾದಿ ಕಾರಣದಿಂದಾಗಿ ಗುಂಪು ಮಾದರಿಯ ಫೆಲೋಶಿಪ್ ಮುಖ್ಯವಾಗಿದೆ.
4. **ಎಷ್ಟು ತಂಡಗಳಿಗೆ ಫೆಲೋಶಿಪ್ ನೀಡಲಾಗುತ್ತದೆ.**
   ಒಟ್ಟು 75 ತಂಡಗಳಿಗೆ ನೀಡಲಾಗುತ್ತದೆ.
5. **ಅರ್ಜಿ ಸಲ್ಲಿಸಲು ವಯೋಮಿತಿ ಇದೆಯೆ**?
   22 ರಿಂದ 50 ವಯೋಮಾನದವರು. ಗ್ರಾಮ ವಿಕಾಸದಲ್ಲಿ ಆಸಕ್ತಿ ಮತ್ತು ಬದ್ದತೆ ಇರುವುದು ಮುಖ್ಯವಷ್ಟೆ. ಅರ್ಜಿ ಸಲ್ಲಿಸುವ ಮೂರು ಜನರಲ್ಲಿ ವಿವಿಧ ವಯೋಮಾನದವರು ಬೇಕಿದ್ದರೆ ಜೊತೆ ಸೇರಿ ಅರ್ಜಿ ಸಲ್ಲಿಸಬಹುದು.
6. **ಅರ್ಜಿ ಸಲ್ಲಿಸಲು ಶೈಕ್ಷಣಿಕ ಅರ್ಹತೆ ಏನಿರಬೇಕು**?
   ನಿರ್ದಿಷ್ಟವಾಗಿ ಯಾವುದೇ ಶೈಕ್ಷಣಿಕ ಅರ್ಹತೆ ನಿಗದಿಪಡಿಸಿಲ್ಲ. ಆದಾಗ್ಯೂ ಕನ್ನಡ ಭಾಷೆಯ ಓದು ಮತ್ತು ಬರಹ ತಿಳಿದಿರುವುದು ಕಡ್ಡಾಯ. ತಂಡದಲ್ಲಿ ಕನಿಷ್ಠ ಒಬ್ಬರಾದರೂ ಎಸ್.ಎಸ್.ಎಲ್.ಸಿ ಅಧ್ಯಯನ ಮಾಡಿರಬೇಕು ಹಾಗೂ ಸ್ಮಾರ್ಟ್ ಫೋನ್ ಬಳಕೆ ತಿಳಿದಿರಬೇಕು.

7. **ಈ ಫೆಲೋಶಿಪ್‌ನಲ್ಲಿ ಫೆಲೋಗಳಿಗೆ ಮಾಸಿಕ ಗೌರವಧನ ನೀಡಲಾಗುತ್ತದೆಯೆ?**
   ಹೌದು. ಗ್ರಾಮದಲ್ಲಿ ವಾಸವಿರುವ (ಇಬ್ಬರಿಗೆ) ಅಭ್ಯರ್ಥಿಗಳಿಗೆ ಮಾಸಿಕ ರೂ 5000 ಗೌರವಧನ ನೀಡಲಾಗುವುದು. ಅಲ್ಲದೆ ಆಯ್ಕೆಯಾದ ಪ್ರತಿಯೊಂದೂ ತಂಡಕ್ಕೂ ಅವರು ತಮ್ಮ ಗ್ರಾಮ ವಿಕಾಸಕ್ಕೆ ರೂಪಿಸುವ ಚಟುವಟಿಕೆಗಳಿಗೆ ಮೊದಲ ವರ್ಷ ರೂ 50000ವರೆಗೆ ಮೂಲಧನ ನೀಡಲಾಗುವುದು.
8. **ತರಬೇತಿಯಲ್ಲಿ ಮತ್ತು ಸಭೆಗಳಲ್ಲಿ ಭಾಗವಹಿಸುವುದು ಕಡ್ಡಾಯವೇ?**
   ಹೌದು. ಆದರೆ ಗ್ರಾಮದಿಂದ ಹೊರಗಿರುವ ಅಭ್ಯರ್ಥಿಗಳಿಗೆ ತರಬೇತಿ ಸಮಯ ಮತ್ತು ಸ್ವರೂಪದಲ್ಲಿ ಬದಲಾವಣೆ ಇರುತ್ತದೆ. ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ಇರುತ್ತದೆ.
9. **ತಮ್ಮ ವೃತ್ತಿ ನಿರ್ವಹಿಸಿಕೊಂಡು ಈ ಫೆಲೋಶಿಪ್‌ನಲ್ಲಿ ಭಾಗವಹಿಸಬಹುದೇ?**
   ಹೌದು. ಅಂತಹ ಅಭ್ಯರ್ಥಿಗಳೇ ಈ ಫೆಲೋಶಿಪ್‌ನ ನಿರೀಕ್ಷೆ.
10. **ಈ ಫೆಲೋಶಿಪ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ಎಷ್ಟು ಸಮಯ ಕೊಡಬೇಕು?**
    ಮೂರು ವರ್ಷ ತಮ್ಮ ಬದ್ದತೆಯನ್ನು ಈ ಫೆಲೋಶಿಪ್‌ಗೆ ನೀಡುವುದು ಮುಖ್ಯವಾಗಿರುತ್ತದೆ. ವಾರದಲ್ಲಿ ಕನಿಷ್ಠ 10 ಗಂಟೆಗಳ ಸಮಯವನ್ನು ವಿನಿಯೋಗಿಸಬೇಕು.
11. **ಫೆಲೋಶಿಪ್ ಯಾವಾಗ ಆರಂಭವಾಗುತ್ತದೆ?**
    ಜನವರಿ–2023 ಮೊದಲ ವಾರ ಆರಂಭವಾಗಲಿದೆ.
12. **ಫೆಲೋಶಿಪ್‌ನ ಕೊನೆಯಲ್ಲಿ ವಿಶ್ವವಿದ್ಯಾಲಯದಿಂದ ಫೆಲೋಗಳಿಗೆ ಪ್ರಮಾಣ ಪತ್ರ ನೀಡಲಾಗುವುದೇ?**
    ಹೌದು. ಯಶಸ್ವಿ ತಂಡಗಳಿಗೆ / ಅಭ್ಯರ್ಥಿಗಳಿಗೆ ನೀಡಲಾಗುತ್ತದೆ.

*ನಿಮ್ಮಲ್ಲಿ ಮನವಿ*

**ಈ ರೀತಿಯಲ್ಲಿ ಗ್ರಾಮಸ್ಥರೇ ತಮ್ಮ ಗ್ರಾಮದ ವಿಕಾಸಪಥವನ್ನು ನಿರ್ಧರಿಸುವ ಮತ್ತು ಅದನ್ನು ಕ್ರಿಯಾಗತಗೊಳಿಸುವ ವೈಶಿಷ್ಟ್ಯಪೂರ್ಣ ಪ್ರಯೋಗದ ಜೊತೆಗೆ ನಾವೆಲ್ಲರೂ ಜೋಡಿಸಿಕೊಳ್ಳೋಣ.**

**ಆ ಮೂಲಕ ಆತ್ಮನಿರ್ಭರ ಭಾರತವನ್ನು ಕಟ್ಟುವ ಕೆಲಸವನ್ನು ನಮ್ಮ ನಮ್ಮ ಗ್ರಾಮಗಳಲ್ಲಿ ಆರಂಭಿಸೋಣ. ಗ್ರಾಮ ವಿಕಾಸದ ಹೊಸ ಮನ್ವಂತರಕ್ಕೆ ಸಾಕ್ಷಿಯಾಗೋಣ.**